ಶ್ರೀ ಟಿ. ಬಿ. ಜಯಚಂದ್ರ.—ಸ್ವಾಮಿ, ಈ ನೇತ್ರಾವತಿಯ ನೀರನ್ನು ಉಪಯೋಗಿಸಿ ಕೊಂಡು ಲಿಫ್ಟ್ ಇರಿಗೇಷನ್ ಮಾಡತಕ್ಕಂಥ ವಿಚಾರ ಸರ್ಕಾರದವರ ಪರಿಶೀಲನೆಯಲ್ಲಿದೆಯೇ? ಹಾಗಿದ್ದರೆ ಅದನ್ನು ತಮ್ಮ ಕಾಲದಲ್ಲಾದರೂ ಮಾಡಿಸಿ ನಮ್ಮ ತುಮಕೂರು ಜಿಲ್ಲೆಗೆ ನೀರು ಪೂರೈಸುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ?

ಶ್ರೀ ಆರ್. ಗುಂಡೂರಾವ್.—ಸ್ವಾಮಿ ತಮಗೆ ಗೊತ್ತಿರುವಹಾಗೆ ಈ ಲಿಫ್ಟ್ ಇರಿಗೇಷನ್ ಸ್ಕೀಮನ್ನು ಸಣ್ಣ ಸಣ್ಣ ಹೊಳೆಗಳ ದಡಗಳು ಇರುವ ಕಡೆ ಚಿಕ್ಕ ಪ್ರದೇಶದಲ್ಲಿ ಹಾಕುವಂಥಾದ್ದು ಇದೆ. ಇಂತಹ ದೊಡ್ಡ ಪ್ರದೇಶದಲ್ಲಿ ಹಾಕುವುದೆಂದರೆ ಅದಕ್ಕೆ ಜಾಸ್ತಿ ಖರ್ಚಾಗುತ್ತದೆ. ಇವತ್ತಿನ ಹಣಕಾಸಿನ ಪರಿಸ್ಥಿತಿಯಲ್ಲಿ ಅದನ್ನು ನಾವು ಪರಿಶೀಲನೆ ಮಾಡುವ ಪರಿಸ್ಥಿತಿಯಲ್ಲಿ ಇಲ್ಲ. ಈ ನೇತ್ರಾವತಿಯ ನದಿಯ ವಿಚಾರ ಇನ್‌ವೆಸ್ಟಿಗೇಷನ್ ಸ್ಟೇಜ್‌ನಲ್ಲಿದೆ. ಆದೆಲ್ಲಾ ಆದಮೇಲೆ ತುಮಕೂರು ಜಿಲ್ಲೆಗೇ ಆಗಲೀ, ಇನ್ನೊಂದು ಜಿಲ್ಲೆಗೇ ಆಗಲೀ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಬರುತ್ತದೆ ಎಂಬುದನ್ನು ಹೇಳ ಬಹುದು. ಈಗಲೇ ಏನನ್ನೂ ಹೇಳುವುದಕ್ಕೆ ಬರುವುದಿಲ್ಲ.

ಶ್ರೀ ಎಂ. ಸಿ. ಬಸಪ್ಪ.—ಸ್ವಾಮಿ, ಮಾನ್ಯ ಮುಖ್ಯ ಮಂತ್ರಿಯವರು ಅವರ ಜಿಲ್ಲೆಯಲ್ಲಿ ಲಿಫ್ಟ್ ಇರಿಗೇಷನ್ ಹಾಕುವುದರಿಂದ ಖರ್ಚು ಬಹಳ ಜಾಸ್ತಿಯಾಗುತ್ತದೆ, ಆದ್ದರಿಂದ ಅದು ಸಾಧ್ಯವಾಗುವುದಿಲ್ಲ ವೆಂದು ಉತ್ತರ ಕೊಟ್ಟಿದ್ದಾರೆ. ಈಗಾಗಲೇ ಮಲಪ್ರಭಾ ಯೋಜನೆಯಲ್ಲಿ ೮-೯ ಲಿಫ್ಟ್ ಇರಿಗೇಷನ್ ಫಂಕ್ಷನ್ ಮಾಡುತ್ತಿವೆ. ಅಲ್ಲಿ ಒಂದು ಎಕರೆ ಪ್ರದೇಶದಲ್ಲಿ ಲಿಫ್ಟ್ ಇರಿಗೇಷನ್ ಮತ್ತು ಫ್ಲೋ ಇರಿಗೇಷನ್ ಮಾಡಬೇಕಾದರೆ ಎಷ್ಟು ಖರ್ಚು ಬಿತ್ತು ಎಂದು ಹೇಳಬಹುದೇ? ಪರ್ ಎಕರೆ ಕಾಸ್ಟ್ ಏನು ಎಂಬುದನ್ನು ಹೇಳಬೇಕು. ಅದೇ ರೀತಿ ಈ ನೇತ್ರಾವತಿ ಯೋಜನೆಯಲ್ಲಿ ಈ ಲಿಫ್ಟ್ ಇರಿಗೇಷನ್‌ನ್ನು ಏತಕ್ಕೆ ಮಾಡಬಾರದು?

ಶ್ರೀ ಆರ್. ಗುಂಡೂರಾವ್.—ಆ ಅಂಕಿಅಂಶ ನನ್ನಲ್ಲಿ ಇಲ್ಲ. ಸಾಮಾನ್ಯವಾಗಿ ಆಲ್ಲಿ ಲಿಫ್ಟ್ ಇರಿ ಗೇಷನ್ ಹಾಕಬೇಕಾದರೆ ಜಾಸ್ತಿ ಖರ್ಚಾಗುತ್ತದೆ. ಎಷ್ಟು ದೂರದವರೆಗೆ ಅದನ್ನು ಹಾಕಬೇಕು, ನೀರನ್ನು ಎಷ್ಟು ಪ್ರಮಾಣದಲ್ಲಿ ಸಂಗ್ರಹಣೆ ಮಾಡಬೇಕು ಇದರ ಮೇಲೆ ಅದು ಹೊಂದಿಕೊಂಡಿರುತ್ತದೆ. ಇದು ಈಗ ಇನ್‌ವೆಸ್ಟಿಗೇಷನ್ ಸ್ಟೇಜ್‌ನಲ್ಲಿ ಇದೆ. ಈ ಹಂತದಲ್ಲಿ ಯಾವುದನ್ನೂ ಹೇಳುವುದಕ್ಕೆ ಬರುವುದಿಲ್ಲ.

Krishna River Water Dispute, utilisation of water

641 SRI SHEERANALY CHANDRASHEKAR (Hosanagar).—Will the Chief Minister be pleased to state.—

(a) the quantity of water in terms of cusecs, the State can utilise as per the Award passed in the Krishna Water dispute ;

(b) whether there is a time limit or the period within which the State has to use the water ?

SRI R GUNDU RAO (Chief Minister).—

(a) The allocation to Karnataka as per the Krishna Tribunal' decision is 734 TMC as below.—

(1) 700 TMC out of 75% dependable flow of 2060 TMC of the river Krishna; and

(2) 34 TMC out of regenerated waters.

(b) Yes.

ಶ್ರೀ ಎಸ್. ಶೀರ್ನಾಳಿ ಚಂದ್ರಶೇಖರ್.— ಸ್ವಾಮಿ, ಈ ಕೃಷ್ಣಾ ನದಿಯ ನೀರಿನ ವಿವಾದದ ಪಂಚಾಯಿತಿಯ ತೀರ್ಪಿನ ಪ್ರಕಾರ ರಾಜ್ಯಕ್ಕೆ ಎಷ್ಟು ಕ್ಯೂಸೆಕ್ಸ್ ನೀರನ್ನು ಉಪಯೋಗಿಸಿ ಕೊಳ್ಳುವುದಕ್ಕೆ ಅವಕಾಶ ಕೊಟ್ಟಿದೆ? ಈವರೆಗೆ ಎಷ್ಟು ಕ್ಯೂಸೆಕ್ಸ್ ನೀರನ್ನು ಉಪಯೋಗಿಸಿ ಕೊಳ್ಳಲಾಗಿದೆ? ಇನ್ನೂ ಎಷ್ಟು ಕ್ಯೂಸೆಕ್ಸ್ ನೀರನ್ನು ಉಪಯೋಗಿಸಿಕೊಳ್ಳಬೇಕಾಗಿದೆ ಎಂಬುದನ್ನು ತಿಳಿಸುತ್ತೀರಾ?

ಶ್ರೀ ಆರ್. ಗುಂಡೂರಾವ್.—ಈಗ ಸುಮಾರು ತುಂಗಭದ್ರಾದಿಂದ ೧೩೦ ಟಿ.ಎಂ.ಸಿ.ಎಫ್‌ನಷ್ಟು ನೀರನ್ನು ಉಪಯೋಗಿಸಿಕೊಂಡಿದ್ದೇವೆ. ಭದ್ರಾದಲ್ಲಿ ೬೨ ಟಿ.ಎಂ.ಸಿ.ಎಫ್ ನಷ್ಟು ಮೈಸೂರ್ ೧೦ ಗೇಷನಲ್ಲಿ ೧೨೦ ಟಿ.ಎಂ.ಸಿ.ಎಫ್ ನಷ್ಟು, ತುಂಗಾದಲ್ಲಿ ೧೨ ಟಿ.ಎಂ.ಸಿ.ಎಫ್ ನಷ್ಟು ವೇದದಲ್ಲಿ ೪೨ ಟಿ.ಎಂ.ಸಿ.ಎಫ್ ನಷ್ಟು ಮೀಡಿಯಂ ಇರಿಗೇಷನ್‌ನಲ್ಲಿ ೫೧ ಟಿ.ಎಂ ಸಿ.ಎಫ್ ನಷ್ಟು, ಮಲಪ್ರಭಾ ಮತ್ತು ಘಟಪ್ರಭಾದಲ್ಲಿ ೨೨ ಟಿ.ಎಂ.ಸಿ.ಎಫ್ ನಷ್ಟು ನೀರನ್ನು ನಾವು ಉಪಯೋಗಿಸಿ ಕೊಂಡಿದ್ದೇವೆ.

ಶ್ರೀ ಎಸ್. ಶೀರ್ನಾಳಿ ಚಂದ್ರಶೇಖರ್.—ಇನ್ನು ಎಷ್ಟು ನೀರು ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶವಿದೆ?

ಶ್ರೀ ಆರ್. ಗುಂಡೂರಾವ್.—ಸುಮಾರು ೧೦೦ ಟಿ.ಎಂ.ಸಿ.ಎಫ್‌ನಷ್ಟು.

ಶ್ರೀ ಎಸ್. ಶೀರ್ನಾಳಿ ಚಂದ್ರಶೇಖರ್.—ಇದನ್ನು ಉಪಯೋಗಿಸಿಕೊಳ್ಳಲು ಒಂದು ಅವಧಿಯನ್ನು ನಿರ್ಧಾರ ಮಾಡಿಕೊಂಡಿದ್ದೀರಿ ಎಂದು ನಾನು ತಿಳಿದುಕೊಂಡಿದ್ದೇನೆ. ಯಾವ ಅವಧಿಯಲ್ಲಿ ಈ ನೀರನ್ನು ಉಪಯೋಗಿಸಿಕೊಳ್ಳುತ್ತೀರಿ ಎಂಬುದನ್ನು ಹೇಳಬಹುದೇ?

ಶ್ರೀ ಆರ್. ಗುಂಡೂರಾವ್.—ಇದು ೨೦೨೦ನೇ ಇಸವಿಯವರೆಗೆ ಅವಧಿ ಇದೆ. ಪುನಃ ಇದನ್ನು ರಿವ್ಯೂ ಮಾಡುತ್ತಾರೆ.

ಶ್ರೀ ಎಸ್. ಶೀರ್ನಾಳಿ ಚಂದ್ರಶೇಖರ್ — ಅಂದರೆ ೨೦ ವರ್ಷದವರೆಗೆ ಅವಧಿ ಇದ್ದಹಾಗೆ ಆಯಿತು. ಈ ಬಗ್ಗೆ ತಮಿಳುನಾಡಿನವರ ಅಭಿಪ್ರಾಯ ಪಡೆದುಕೊಂಡಿದ್ದೀರಾ? ಈ ಕೃಷ್ಣಾ ಮೇಲ್ದಂಡೆ ಯೋಜನೆಯ ಕೆಲಸಕಾರ್ಯಗಳ ವೇಗವನ್ನು ಹೆಚ್ಚು ಮಾಡುತ್ತೀರಾ? ಈ ಆಲಮಟ್ಟಿ, ನಾರಾಯಣಪುರ, ಅಪ್ಪರ್ ತುಂಗಾ, ಅಪ್ಪರ್ ಭದ್ರಾ ಇವೆಲ್ಲಾ ಇನ್ನೂ ಸರ್ವೆಯೊಳಗೆ ಇವೆ. ಇವನ್ನೆಲ್ಲಾ ಬೇಗ ಪೂರ್ತಿ ಮಾಡದಿದ್ದರೆ ನಮ್ಮ ರಾಜ್ಯಕ್ಕೆ ಅನ್ಯಾಯವಾಗುವುದಿಲ್ಲವೇ?

ಶ್ರೀ ಆರ್. ಗುಂಡೂರಾವ್.—ಸರ್ಕಾರ ಈಗಾಗಲೇ ಈ ವಿಚಾರದಲ್ಲಿ ಯೋಚನೆ ಮಾಡಿ ಇನ್ನು ೧೦, ೧೫ ವರ್ಷಗಳಲ್ಲಿ ಇವನ್ನೆಲ್ಲಾ ಪೂರ್ತಿ ಮಾಡಿ, ನಮ್ಮ ರಾಜ್ಯಕ್ಕೆ ಎಷ್ಟು ನೀರು ಸಿಕ್ಕಬೇಕೋ ಅಷ್ಟು ನೀರನ್ನು ಪೂರ್ತಿಯಾಗಿ ಉಪಯೋಗಿಸಿಕೊಳ್ಳುವುದಕ್ಕಾಗಿ ಒಂದು ಯೋಜನೆಯನ್ನು ತಯಾರು ಮಾಡುತ್ತಿದೆ.

ಶ್ರೀ ಎಸ್. ಶೀರ್ನಾಳಿ ಚಂದ್ರಶೇಖರ್.—ಈ ಅಪ್ಪರ್ ತುಂಗಾ ಯೋಜನೆಯನ್ನು ಇನ್ನು ೨೦ ವರ್ಷದೊಳಗಾಗಿ ತಾವು ಪೂರೈಸುತ್ತೀರಾ?

ಶ್ರೀ ಆರ್. ಗುಂಡೂರಾವ್.—ಸರ್ಕಾರದ ಉದ್ದೇಶ ಅದೇ ಆಗಿದೆ.

ಶ್ರೀ ಎಂ. ಎಲ್. ಶಿವಣ್ಣ.— ಮಾನ್ಯ ಮುಖ್ಯ ಮಂತ್ರಿಯವರು ಈ ಭದ್ರಾ ಜಲಾಶಯದಿಂದ ೬೨ ಕ್ಯೂಸೆಕ್ಸ್‌ನಷ್ಟು ನೀರು ಉಪಯೋಗಿಸಿಕೊಂಡಿದ್ದೇವೆ ಎಂದು ಹೇಳಿದರು ಈ ಭದ್ರಾ ಅಚ್ಚುಕಟ್ಟು ದಾರರಿಗೆ ಈಗ ನೀರಿಗೆ ತೊಂದರೆಯಾಗಿರುವುದರಿಂದ ಈ ಕೃಷ್ಣಾ ನದಿಯಿಂದ ೬೦ ಕ್ಯೂಸೆಕ್ಸ್‌ನಷ್ಟು ಜಾಸ್ತಿ ನೀರು ಉಪಯೋಗಿಸಿಕೊಂಡು ಅವರಿಗೆ ನೀರು ಕೊಡುವುದಕ್ಕಾಗುತ್ತದೆಯೇ?

ಶ್ರೀ ಆರ್. ಗುಂಡೂರಾವ್.—ಅದನ್ನು ಯೋಚನೆ ಮಾಡೋಣ, ಅಲ್ಲಿ ನೀರು ಜಾಸ್ತಿಯಾದರೆ ಕೊಡುತ್ತೇವೆ.

ಶ್ರೀ ಎಸ್ ಶೀರ್ನಾಳಿ ಚಂದ್ರಶೇಖರ್.—ಸ್ವಾಮಿ ಕಳೆದ ಶಾಸನಸಭೆಯಲ್ಲಿ ಅಪ್ಪರ್ ತುಂಗಾ ಯೋಜನೆಯ ಬಗ್ಗೆ ಪ್ರಶ್ನೆ ಹಾಕಿದಾಗ ಅದು ಇನ್ನೂ ಸರ್ವೆಯಲ್ಲಿ ಇವೆಯೆಂದು ತಾವು ಹೇಳಿದ್ದೀರಿ ಈಗ ೨೦ ವರ್ಷದ ಅವಧಿಯಲ್ಲಿ ೧೦೦ ಕ್ಯೂಸೆಕ್ಸ್ ನೀರನ್ನು ಉಪಯೋಗಿಸಿಕೊಳ್ಳಬೇಕು ಎಂದು ಹೇಳಿದ್ದೀರಿ. ಇದನ್ನು ೨೦ ವರ್ಷದೊಳಗೆ ಕಾರ್ಯಗತ ಮಾಡುವುದಕ್ಕೆ ಸಾಧ್ಯವೇ? ತಮಗೆ ಕೇಂದ್ರಸರ್ಕಾರದ ಮೇಲೆ

ಇರತಕ್ಕಂಥ ವರ್ಚಸ್ಸಿನಲ್ಲಿ ಇದನ್ನು ಅಜರಾಮರವಾಗಿ ಕಾರ್ಯಗತ ಮಾಡಲು ಶಕ್ತಿ ಇದೆ. ಅದನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಆರ್. ಗುಂಡೂರಾವ್.—ಇದನ್ನು ೨೦ ವರ್ಷದೊಳಗೆ ಅಲ್ಲದೇ ೨೦ ವರ್ಷದ ಮೇಲೂ ಉಪಯೋಗಿಸಿಕೊಳ್ಳುವುದಕ್ಕೆ ಬಾರದು ಅಂತ ಅಲ್ಲ, ನಮ್ಮ ಅವಧಿಯಲ್ಲಿ ನಾವು ಅಷ್ಟನ್ನೂ ಉಪಯೋಗಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ. ಆಮೇಲೆ ಪುನ: ಅದನ್ನು ಮುಂದು ವರಿಸಿಕೊಳ್ಳಬಹುದು.

ಶ್ರೀ ಜಿ. ಕೆ. ತಕ್ಕೇಡ್.—ಈ ಮಾದಾಯಿ ರಿವರ್ ಏನಿದೆ ಇದರಲ್ಲಿ ೧೦ ಟಿ ಎಂ.ಸಿ.ಯಷ್ಟು ನೀರು ಇದೆ ಎಂದು ಸರ್ವೆಯಿಂದ ತಿಳಿದು ಬಂದಿದೆ. ಇದನ್ನು ಮಲಪ್ರಭಾ ರಿಸರ್ವಾಯರ್‌ಗೆ ಕೊಡಿಸಬೇಕು ಎನ್ನತಕ್ಕಂಥ ಒಂದು ಯೋಜನೆ ಇದೆ. ಈ ಯೋಜನೆಯನ್ನು ಆದಷ್ಟು ಬೇಗ ಕಾರ್ಯರೂಪಕ್ಕೆ ತರುತ್ತೀರಾ?

ಶ್ರೀ ಆರ್. ಗುಂಡೂರಾವ್.—ಅದು ಹೈಡ್ರೋ ಎಲೆಕ್ಟ್ರಿಕ್ ಯೋಜನೆ ಎಂಬುದು ಈಗಾಗಲೇ ತಮಗೆ ಗೊತ್ತಿರಬೇಕು. ಇರಿಗೇಷನ್‌ಗೆ ಅದು ಯಾವತರಹದಲ್ಲೂ ಪ್ರಯೋಜನಕ್ಕೆ ಬರಲಾರದು ಎಂದು ಹೇಳುತ್ತೇನೆ.

ಶ್ರೀ ಜಿ. ಕೆ. ತಕ್ಕೇಡ್.—ಸ್ವಾಮಿ, ಇದು ಇರಿಗೇಷನ್ ಸಲುವಾಗಿ ಹಿಂದಿನ ಇಂಜಿನಿಯರ್ ಬಾಳ ಕುಂದರಗಿಯವರು ಖಾನಾಪುರದಲ್ಲಿ ಈ ಘಟಪ್ರಭಾ ಮತ್ತು ಮಲಪ್ರಭಾ ಯೋಜನೆಗೆ ಈ ಮದಾಯಿ ರಿವರನ್ನು ಕೂಡಿಸಬೇಕು ಎಂದು ಹೇಳಿ ಒಂದು ಯೋಜನೆಯನ್ನು ಸಿದ್ಧಪಡಿಸಿದ್ದಾರೆ. ಆಗ ಅದು ಕಾರ್ಯರೂಪಕ್ಕೆ ಬರುವಂಥ ಪರಿಸ್ಥಿತಿ ಇತ್ತು. ಈಗ ಈ ಯೋಜನೆಯನ್ನು ಕೈಕೊಳ್ಳದಂಥ ಪರಿಸ್ಥಿತಿಯಲ್ಲಿ ಇದೆ. ಹೈಡ್ರೋ ಎಲೆಕ್ಟ್ರಿಕ್ ಸಲುವಾಗಿ ಬೇರೆ ಯೋಜನೆ ಮಾಡಬಹುದು ಆದರೆ ಈ ಮದಾಯಿ ರಿವರನ್ನು ಈ ಮಲಪ್ರಭಾ ರಿಸರ್ವಾಯರ್‌ಗೆ ಕೂಡಿಸಿದ್ದಾದರೆ ಇನ್ನೂ ೧½ ಸಾವಿರ ಎಕರೆ ಹೆಚ್ಚು ನೀರಾವರಿ ಯಾಗುವ ಸಾಧ್ಯತೆ ಇದೆ. ಈ ಬಗ್ಗೆ ಒಂದು ಯೋಜನೆಯನ್ನು ತಯಾರು ಮಾಡಿ ಇಟ್ಟುಕೊಂಡಿದ್ದರೂ ಕೂಡ ಇನ್ನೂ ಈ ಯೋಜನೆಯನ್ನು ಕಾರ್ಯರೂಪಕ್ಕೆ ಏತಕ್ಕೆ ತರಲಿಲ್ಲ ಎಂಬುದನ್ನು ಮಾನ್ಯ ಮುಖ್ಯ ಮಂತ್ರಿಯವರು ತಿಳಿಸುತ್ತಾರೆಯೇ?

ಶ್ರೀ ಆರ್ ಗುಂಡೂರಾವ್.—ಸ್ವಾಮಿ, ಈ ಹೈಡ್ರೋ ಎಲೆಕ್ಟ್ರಿಕ್ ಯೋಜನೆಯನ್ನು ಚಿಕ್ಕ ಯೋಜನೆಯಾಗಿ ನಾವು ಇಟ್ಟು ಕೊಂಡಿದ್ದೇವೆ. ಇಂಜಿನಿಯರ್‌ರವರು ಒಂದು ಯೋಜನೆ ತಯಾರು ಮಾಡಿ ಇಟ್ಟಿದ್ದಾರೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅದನ್ನು ನೋಡೋಣ.

ಶ್ರೀ ಎಸ್. ಶೀರ್ಷಾಳಿ ಚಂದ್ರಶೇಖರ್.—ನಾನು ಖಚಿತವಾಗಿ ಪ್ರಶ್ನೆ ಕೇಳಿದ್ದೇನೆ. ನನಗೆ ಆಗಲೇ ಸರಿಯಾದ ಉತ್ತರ ಬರಲಿಲ್ಲ. ಈ ಅಪ್ಪರ್ ತುಂಗಾ ಯೋಜನೆಯನ್ನು ಬೇಗ ಪ್ರಾರಂಭಿಸುವ ಬಗ್ಗೆ ನಮ್ಮ ಬೇಡಿಕೆ ಬಹಳ ವರ್ಷಗಳಿಂದಲೂ ಇದೆ. ಈ ಕಾರ್ಯ ಸ್ಥಗಿತವಾಗುತ್ತಿದೆ. ಏತಕ್ಕೆ ಎನ್ನುವುದು ನಮಗೆ ಗೊತ್ತಿಲ್ಲ. ಈ ಅಪ್ಪರ್ ತುಂಗಾ ಯೋಜನೆಯನ್ನು ಯಾವಾಗ ಪ್ರಾರಂಭ ಮಾಡತ್ತೀರಾ ಎಂಬುದನ್ನು ದಯಮಾಡಿ ತಿಳಿಸಬೇಕು.

ಶ್ರೀ ಆರ್. ಗುಂಡೂರಾವ್.—ಸ್ವಾಮಿ, ಇದನ್ನು ಪ್ರಾರಂಭ ಮಾಡುವುದಕ್ಕೆ ಸಾಕಷ್ಟು ಹಣ ಬೇಕಾಗಿದೆ. ಈಗ ಅದು ಇನ್‌ವೆಸ್ಟಿಗೇಷನ್ ಸ್ಟೇಜ್‌ನಲ್ಲಿ ಇದೆ. ಆದಷ್ಟು ಬೇಗ ಅದನ್ನು ಪ್ರಾರಂಭ ಮಾಡಬೇಕೆಂಬುದೇ ಸರ್ಕಾರದ ಉದ್ದೇಶ. ನಾವು ಕೇಂದ್ರದ ನೀರಾವರಿ ಮಂತ್ರಿಯವರೊಡನೆ ವ್ಯವಹಾರ ಮಾಡಿ ಅವರಿಂದ ನಮಗೆ ಸಾಕಷ್ಟು ಹಣ ಸಹಾಯ ಸಿಕ್ಕಿದರೆ ನಮ್ಮ ಅವಧಿಯೊಳಗೆ ಅದನ್ನು ನಾವು ಪ್ರಾರಂಭ ಮಾಡುತ್ತೇವೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಈ ಯೋಜನೆಯಿಂದ ನಮ್ಮ ಕಡೆ ೬೫ ಸಾವಿರ ಎಕರೆಯಷ್ಟು ನೀರಾವರಿ ಪ್ರದೇಶ ಆಗತಕ್ಕಂಥಾದರಲ್ಲಿ ಈಗ ೧೦ ಸಾವಿರ ಎಕರೆಯಷ್ಟು ನೀರಾವರಿ ಪ್ರದೇಶವನ್ನು ಕಡಿಮೆ ಮಾಡಿದ್ದಾರೆ. ಇದನ್ನು ಕಡಿಮೆ ಮಾಡಿದ್ದರಿಂದ ನಮ್ಮ ತಾಲ್ಲೂಕಿನ ಜನತೆಗೆ ಬಹಳ ತೊಂದರೆಯಾಗಿದೆ. ಸರ್ಕಾರದವರು ಇದನ್ನು ಪುನರ್ ಪರಿಶೀಲನೆ ಮಾಡುತ್ತಾರೆಯೇ?

ಶ್ರೀ ಆರ್. ಗುಂಡೂರಾವ್.—ಅಷ್ಟು ಕಡಿಮೆ ಆಗಿಲ್ಲ. ಅದನ್ನು ಪುನಃ ಯೋಚನೆ ಮಾಡೋಣ.